ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು:

ಮುಖ್ಯ ವಿಚಾರಣೆ ಶ್ರೀ ಕೆ ಜಿ ಎಸ್ ಅರ್ಜಿದಾರರ ಪರ ವಕೀಲರಿಂದ -

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ. ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಈ ದಿವಸ ನಾನು ಓಎಸ್ 676/2006 ದಾವೆಯ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-1 ಮತ್ತು 2 ಅಂತ, ಆ ದಾವೆಂ ಯುಪೂರ್ತಿಯ ರೋಜ್ ನಾಮದ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-3 ಅಂತ, ಆ ದಾವೆಯ ವಾದ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-4 ಅಂತ, ಆ ದಾವೆಯ ವಾದಿ ಮತ್ತು ಒಬ್ಬ ಸಾಕ್ಷಿಯ ಸಾಕ್ಷಿ ಹೇಳಿಕೆಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-5 ಮತ್ತು 6 ಅಂತ, ಆ ದಾವೆಯದಲ್ಲಿ ಹಾಜರುಮಾಡಿದ ಅಗ್ರಿಮೆಂಟ್‌ನ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-7 ಅಂತ, 2 ಪಹಣಿಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-8 ಮತ್ತು 9 ಅಂತ, ಆ ದಾವೆಯಲ್ಲಿ ಕೊಟ್ಟಿರುವ ವಕೀಲರ ನೋಟೀಸ್‌ನ ಪ್ರತಿ ನಿಪಿ-10 ಅಂತ, ಅದರ ಅಂಚೆ ಸ್ವೀಕೃತಿಗಳನ್ನು ಒಟ್ಟಾಗಿ ನಿಪಿ-10 ಎ ಅಂತ, ಆ ದಾವೆಯಲ್ಲಿ ಇದ್ದಂತಹ ಪ್ರತಿವಾದಿ 3 ಇವರಿಗೆ ವಕೀಲರು ಕಳುಹಿಸಿದ ನೋಟೀಸ್ ಮತ್ತು ಲಕೋಟೆ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-11 ಮತ್ತು ನಿಪಿ-11 ಎ ಅಂತ, ಅಂಚೆ ರಶೀದಿಗಳ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅವುಗಳನ್ನು ಒಟ್ಟಾಗಿ ನಿಪಿ-11 ಬಿ ಅಂತ, ಜಾರಿ ಅರ್ಜಿ 98/2009 ಅರ್ಜಿಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-12 ಅಂತ, ಆ ಜಾರಿ ಅರ್ಜಿಯ ರೋಜ್ ನಾಮದ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-13 ಅಂತ, ನ್ಯಾಯಾಲಯದಿಂದ ಆದಂತಹ ಕ್ರಯ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-14 ಅಂತ, ಋಣಭಾರ ಪತ್ರದ ದೃಢೀಕೃತ ನಕಲು

ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-15 ಅಂತ, ನಿಪಿ-14ರ ಪ್ರಕಾರ ಆದಂತಹ ಮುಟೇಷನ್ ದೃಢೀಕೃತ ನಕಲು ಪ್ರತಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ-16 ಅಂತ, 13 ಪಹಣಿಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-17 ಲಿಂದ 29 ಅಂತ ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ.)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.